ಸದನದಲ್ಲಿ ಉತ್ತರಿಸುವ ಪ್ರಶ್ನೆ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಸೋಮವಾರ, ದಿನಾಂಕ: 15ನೇ ಜುಲೈ, 2019

ಗ್ರಾಮೀಣ ಭಾಗದಲ್ಲಿ ಪ್ರವಾಸೀ ತಾಣಗಳ ಅಭಿವೃದ್ಧಿ ಕುರಿತು

ಡಾ. ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) -

9 (116) ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಕರ್ನಾಟಕ ರಾಜ್ಯದ ಪ್ರವಾಸೀ ತಾಣಗಳು ಹಾಗೂ ಪ್ರವಾಸೋದ್ಯಮ ಇಲಾಖೆಗೆ ಬರುತ್ತಿರುವ ಆದಾಯವೆಷ್ಟು ;

(ಆ) ಗ್ರಾಮೀಣ ಭಾಗದ ಸುಂದರ ಗಿರಿ-ಶಿಖರಗಳಾದ ಸಾವನದುರ್ಗ ; ನಂದಿಗಿರಿ; ಚೆನ್ನಗಿರಿ ; ಸ್ಕಂದಗಿರಿ ; ಬ್ರಹ್ಮಗಿರಿ ; ವರ್ಧನಗಿರಿ ಎಂಬ ಪಂಚಗಿರಿಗಳು ರಾಜಧಾನಿಗೆ ಕೇವಲ 50 ಕಿ.ಮೀ. ದೂರದಲ್ಲಿದ್ದು ಅಪಾರ ಪ್ರವಾಸಿಗಳನ್ನು ಸೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇಂತಹ ತಾಣಗಳಲ್ಲಿ ಪ್ರವಾಸಿಗರಿಗೆ ಅಗತ್ಯ ಮೂಲಭೂತ ಸೌಕರ್ಯಗಳಾದ ಸರ್ಕಾರಿ ತಂಗುದಾಣ, ಹೋಟೆಲ್, ಚಿಕಿತ್ಸಾ ಕೇಂದ್ರಗಳನ್ನು ಒದಗಿಸಲಾಗಿದೆಯೇ; ಇದಕ್ಕಾಗಿ ಅಗತ್ಯ ಹಣ ಕಾಯ್ದಿರಿಸಲಾಗಿದೆಯೇ ;

(ಈ) ಎತ್ತರದ ಅಪಾಯಕರ ತಾಣಗಳಲ್ಲಿ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿ, ಕುಡಿತದಂತಹ ಸಮಸ್ಯೆ ತಡೆಯಲು ಸುರಕ್ಷಾ ಕ್ರಮಗಳನ್ನು ವಹಿಸಲಾಗಿದೆಯೇ;

(ಉ) ಗ್ರಾಮೀಣ ಭಾಗದ ನಿರುದ್ಯೋಗಿ ಯುವ, ಪ್ರವಾಸೀ ಮಾರ್ಗದರ್ಶಿ (Nature Guide) ಗಳ ನೇಮಕಾತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?